ಬೇಡಿಕೆಗಳನ್ನು ನೋಡಿ ನಾವು ದಿಕ್ಕೂಚಿಯನ್ನು ಹಾಕುತ್ತೇವೆ, ಅದನ್ನು ಮುಂದಿನ ವರ್ಷದಿಂದ ಮಾಡಬಹುದು.

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಯಲ್ಲಾಪುರ ಮತ್ತು ಶಿರಸಿಯಲ್ಲಿ ಇರುವ ಬಗ್ಗೆ ಹೇಳಿದ್ದಾರೆ, ಆದರೆ ನಾನು ಅಂಕೋಲದ ಬಗ್ಗೆ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಅಂಕೋಲ ತಾಲ್ಲೂಕಿನ ಕೇಂದ್ರದಲ್ಲಿಯೇ ಒಂದು ಜ್ಯೂನಿಯರ್ ಕಾಲೇಜು ಆಗಲಿ ಅಥವಾ ಪದವೀ ಕಾಲೇಜು ಸರ್ಕಾರದ ವತಿಯಿಂದ ಇರುವುದಿಲ್ಲ. ಪಕ್ಕದ ತಾಲ್ಲೂಕುಗಳಿಗೆ ವಿದ್ಯಾರ್ಥಿಗಳು ಹೋಗುತ್ತಿದ್ದಾರೆ. ಅಂಕೋಲ ತಾಲ್ಲೂಕಿನಲ್ಲಿ ಆಗತ್ಯ ಇದೆ ಎನ್ನುವುದನ್ನು ಏಕೆ ಅಧಿಕಾರಿಗಳು ನಿಮ್ಮ ಗಮನಕ್ಕೆ ಏಕೆ ತಂದಿಲ್ಲ? ತಮ್ಮಲ್ಲಿ ಏನು ಕೊರತೆ ಇದೆ?

ಶ್ರೀ ಬಿ. ಸೋಮಶೇಖರ್ : ಅದರ ಅವಶ್ಯಕತೆ ಇದ್ದರೆ, ಮುಂದೆ ಪರಿಶೀಲನೆಯನ್ನು ಮಾಡಿ ಏನು ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಮಾನ್ಯ ಅಧ್ಯಕ್ಷರೆ, ತುಂಬಾ ಆಗತ್ಯ ಇದೆ, ಅದನ್ನು ಪರಿಶೀಲನೆಯನ್ನು ಮಾಡಿ, ಮುಂದಿನ ವರ್ಷವೇ ಕಾಲೇಜು ಪ್ರಾರಂಭವಾಗುವುದಕ್ಕೆ ತಕ್ಷಣವೇ ಕ್ರಮವನ್ನು ತೆಗೆದುಕೊಳ್ಳಬೇಕು. ಮತ್ತು ಆಗತ್ಯತೆ ಮತ್ತು ಬೇಡಿಕೆಯ ಬಗ್ಗೆ ಏನು ಸ್ಪಷ್ಟಿಕರಣವನ್ನು ತಾವು ಕೊಟ್ಟಿರೋ 5 ಲಕ್ಷ ರೂಪಾಯಿಗಳನ್ನು ಡೆಪಾಸಿಟ್ ಇಡಬೇಕು, ಕಟ್ಟಡಕ್ಕೆ ಜಾಗವನ್ನು ಒದಗಿಸಿಕೊಡಬೇಕು ಈ ರೀತಿಯಾಗಿ ಈ ವಿವರಗಳನ್ನು ಕೇಳಿದ್ದು ಆಗಿತ್ತು. ಆದರೆ ಈಗ ತಾವು ಕೇಳುತ್ತಿರುವ ವಿವರಗಳು ಏನು ಎಂಬುದನ್ನು ದಯವಿಟ್ಟು ಕಳುಹಿಸಿಕೊಡಬೇಕೆಂದು ವಿನಂತಿಯನ್ನು ತಮ್ಮ ಮೂಲಕ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಿಗೆ ಮಾಹಿತಿಯನ್ನು ಕಳುಹಿಸಿಕೊಡುತ್ತೇನೆ.

ಗುಲ್ಬರ್ಗ ಮತ್ತು ಯಾದಗಿರ್ ಜಿಲ್ಲಾ ಪಂಚಾಯತ್ ಇಂಜಿನಿಯರ್ ವಿಭಾಗಗಳಲ್ಲಿ ಅನಾವಶ್ಯಕ ಸಾಮಗ್ರಿಗಳ ಖರೀದಿ.

2201 - ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ, (ಗುರುಮಿಠಕಲ್) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಮತ್ತು ಯಾದಗಿರ್ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗಗಳು ಅನಾವಶ್ಯಕ ಸಾಮಗ್ರಿಗಳನ್ನು ಖರೀದಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):

ಅ) 1995-96ನೇ ಸಾಲಿನಲ್ಲಿ ಯಾದಗಿರ್ ಹಾಗೂ ಗುಲ್ಬರ್ಗಾ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗಗಳಲ್ಲಿ ಖರೀದಿಸಿರುವ ಕೆಲವೊಂದು ಸಾಮಗ್ರಿಗಳು ಅದೇ ವರ್ಷದಲ್ಲಿ ಉಪಯೋಗಿಸದೇ ಇರುವುದು ಗಮನಕ್ಕೆ ಬಂದಿದೆ. ಆದಾಗ್ಯೂ ಈ

ಸಾಮಗ್ರಿಗಳನ್ನು 1996-97ನೇ ಸಾಲಿನಲ್ಲಿ ಉಪಯೋಗಿಸುವ ಅವಶ್ಯಕತೆ ಇದ್ದು ಅದರಂತೆ ಉಪಯೋಗಿಸಲಾಗುತ್ತಿದೆ.

ಆ) ಉದ್ಭವಿಸುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಮ್ಮ ಉತ್ತರದಲ್ಲಿ ಗುಲ್ಬರ್ಗಾ ಜಿಲ್ಲಾಪಂಚಾಯತ್ ಇಂಜಿನಿಯರಿಂಗ್ ವಿಭಾಗಗಳಲ್ಲಿ ಖರೀದಿಸಿರುವ ಕೆಲವು ಸಾಮಗ್ರಿಗಳು ಅದೇವರ್ಷ ಉಪಯೋಗಿಸದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ, ಆದಾಗ್ಯೂ ಈ ಸಾಮಗ್ರಿಗಳನ್ನು 1996-97ನೇ ಸಾಲಿನಲ್ಲಿ ಉಪಯೋಗಿಸುವ ಅವಶ್ಯಕತೆ ಇದ್ದು ಅದರಂತೆ ಉಪಯೋಗಿಸಲಾಗುತ್ತದೆ. ಎಂದು ಹೇಳಿದ್ದೀರಿ. ಇದು ಕೇವಲ ಗುಲ್ಬರ್ಗಾ, ಯಾದ್‌ಗೀರ್‌ಗೆ ಸಂಬಂಧಪಟ್ಟಂತೆ ಮಾತ್ರ ಈ ಸಮಸ್ಯೆ ಇಲ್ಲ, ಇಡೀ ರಾಜ್ಯದಲ್ಲೇ ಈ ಜಿಲ್ಲಾ ಪಂಚಾಯತಿ ವಿಂಗ್‌ನಲ್ಲಿ ವಿಶೇಷವಾಗಿ ಕೆಲವುಸಾರಿ ಅಲ್ಲಿನ ಅಧ್ಯಕ್ಷರ ಹೇಳಿಕೆಯ ಮೇರೆಗೆ, ಕೆಲವುಸಾರಿ ಅಲ್ಲಿನ ಸ್ಥಳೀಯ ಶಾಸಕರ ಹೇಳಿಕೆಯ ಮೇರೆಗೆ, ಮಂತ್ರಿಗಳ ಹೇಳಿಕೆಯ ಮೇರೆಗೆ ಖರೀದಿಸುತ್ತಿದ್ದಾರೆ. ಇದು ಹೇಗೆ ಎಂದರೆ, ಯಾವ ಸಾಮಗ್ರಿಗಳು ಅವರಿಗೆಬೇಕಾಗಿಲ್ಲ ಆ ಸಾಮಗ್ರಿಗಳನ್ನು ಮುಂದಿನ 5-6 ವರ್ಷಕ್ಕೆ ಆಗುವಷ್ಟನ್ನು ಖರೀದಿಸಿ ಇಟ್ಟುಕೊಂಡಿದ್ದಾರೆ. ತಮಗೆ ಗೊತ್ತಿರುವಂತೆ 60 ಪರ್ಸೆಂಟ್ ಮೆಟೀರಿಯಲ್ ಕಾಂಪೊನೆಂಟ್, 40 ಪರ್ಸೆಂಟ್ ಸಿವಿಲ್ ಕಾಂಪೋನೆಂಟ್ ಇರುತ್ತದೆ ಆದ್ದರಿಂದ 60 ಪರ್ಸೆಂಟ್ ಮೆಟೀರಿಯಲ್ ಕಾಂಪೊನೆಂಟ್ ಇರುವುದರಿಂದ ಅವರು ತಮ್ಮಲ್ಲಿ ಸಾಮಾನು ಇದ್ದರೂ ಕೂಡ ಪೈಪುಗಳು, ನಟ್‌ಗಳು, ಬೋಲ್ಟ್‌ಗಳು, ಹ್ಯಾಂಡಲ್‌ಗಳು, ಇಂಥಾದ್ದನ್ನೆಲ್ಲಾ ಖರೀದಿಮಾಡಿಕೊಂಡು ಸುಮ್ಮನೆ ಇಟ್ಟುಕೊಂಡಿರುತ್ತಾರೆ. ಏಕೆಂದರೆ, ಇದರಲ್ಲಿ ಹೆಚ್ಚು ಪರ್ಸೆಂಟೇಜ್ ಸಿಕ್ಕುತ್ತದೆಂದು ಯಾವುದೇ ಇಂಜಿನಿಯರ್‌ನ್ನು ನೋಡಿದರೂ ಮೊದಲು ಅವರು ಮಾಡುವ ಕೆಲಸ ಎಂದರೆ, ಅವರು ಸಿವಿಲ್ ಕೆಲಸವನ್ನು ಬಿಟ್ಟು ಅಂದರೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಬಿಟ್ಟು, ಪೈಪ್ಡ್ ವಾಟರ್ ಸಪ್ಲೈಯನ್ನು ಬಿಟ್ಟು ಪೈಪುಗಳನ್ನು ಖರೀದಿಸುತ್ತಾರೆ. ಸಿವಿಲ್ ವರ್ಕ್ಸ್‌ನ್ನು ಬಿಡುತ್ತಾರೆ. ಈ ರೀತಿ ಇರುವುದರಿಂದ ಸರ್ಕಾರದವರು ಕೊಡುವಂಥ ಹಣದಲ್ಲಿ ಸುಮಾರು 60 ಪರ್ಸೆಂಟ್ ಕೇವಲ ಖರೀದಿಗೋಸ್ಕರವೇ ಖರ್ಚಾಗುತ್ತದೆ. ಇನ್ನು 40 ಪರ್ಸೆಂಟ್ ಸಿವಿಲ್ ಕೆಲಸವನ್ನು ಅವರು ಮಾಡದೇ ಇರುವ ಕಾರಣ ಆ ಹಣದ ಜೊತೆಗೆ ಈ 60 ಪರ್ಸೆಂಟ್ ಹಣ ಖರ್ಚುಮಾಡಿ ಏನು ಖರೀದಿಸಿರುತ್ತಾರೆ ಅದೂ ಕೂಡ ಡೆಡ್ ಇನ್ವೆಸ್ಟ್‌ಮೆಂಟ್. ಹೀಗಾಗಿ ಆ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆ ಆಗುವುದಿಲ್ಲ. ನಮ್ಮ ಟಾರ್ಗೆಟ್ ಕೂಡ ಪೂರ್ತಿ ಆಗುವುದಿಲ್ಲ. ಆದ್ದರಿಂದ ತಾವು ಈ ಎರಡೂ ಡಿವಿಜನ್‌ಗಳಿಗೆ ಒಂದು ಟೀಮನ್ನು ಕಳುಹಿಸಿ ಇನ್ವೆಸ್ಟಿಗೇಷನ್‌ನ್ನು ಮಾಡಿಸಿ. ಇದರಲ್ಲಿ ಇಂಥವರೇ ಇಂಜಿನಿಯರ್ ಎಂದು ಆಪಾದನೆ ಇಲ್ಲ, ಅವರು ಏನು ಮಾಡುತ್ತಾರೆಂದರೆ ಲೋಕಲ್ ಲೀಡರ್‌ಗಳ ಪ್ರೆಷರ್‌ಗೆ ಈಲ್ಡ್ ಆಗಿ ಅವನಿಗೆ 2 ಲಕ್ಷದ್ದು, ಇವನಿಗೆ 2 ಲಕ್ಷದ್ದು, ಇನ್ನೊಬ್ಬನಿಗೆ 2 ಲಕ್ಷದ್ದು ಹೀಗೆ ಕೊಡುತ್ತಿದ್ದಾರೆ. ಹೀಗೆ ಕೊಟ್ಟು ಇರತಕ್ಕ ಹಣವನ್ನೆಲ್ಲಾ ಮುಗಿಸಿಬಿಡುತ್ತಾರೆ. ಅನಂತರ ಕುಡಿಯುವ ನೀರಿನ ವ್ಯವಸ್ಥೆಗೆ ಹಣವೇ ಇರುವುದಿಲ್ಲ. ಆದ್ದರಿಂದ ತಾವು ಇದರ ಬಗ್ಗೆ ಒಂದು ಪೂರ್ಣ ತನಿಖೆಯನ್ನು ಮಾಡಿಸಿ ಯಾರು ಅನಾವಶ್ಯಕವಾಗಿ ಇಂಥ ವಸ್ತುಗಳನ್ನು ಖರೀದಿಸಿದ್ದಾರೆ ಅವರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೀರೋ ಹೇಗೆ ಅಥವಾ ಇದನ್ನು ಲೋಕಾಯುಕ್ತಕ್ಕೆ ರೆಫರ್ ಮಾಡುತ್ತೀರಾ ಅಥವಾ ಸಿ.ಓ.ಡಿ.ಗಾದರೂ ರೆಫರ್ ಮಾಡಿ ಅವರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತಿರೋ ?

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಹಿರಿಯ ಸದಸ್ಯರಾದ ಮಾನ್ಯ ಖರ್ಗೆಯವರು ಹೇಳಿರುವುದು ಅಕ್ಷರಶಃ ನಿಜವಿದೆ. ಅನೇಕ ಕಡೆ ಅವರು ಹೇಳಿದಂತೆ 60 ಪರ್ಸೆಂಟ್ ಕಾಂಪೊನೆಂಟ್ ಅಲ್ಲ, ಅದು ಶೇಕಡ 80 ರಷ್ಟು ಮೆಟೀರಿಯಲ್ ಕಾಂಪೋನೆಂಟ್‌ಇದೆ. ಯಾದ್ಗೀರ್ ವಿಭಾಗದಲ್ಲಿ ಯಾವ ಯಾವ ವಸ್ತುಗಳನ್ನು ಖರೀದಿಸಿದೆ ಎಂಬ ವಿವರಗಳನ್ನು ತರಿಸಿ ಅದರ ಅನುಬಂಧದ ಪ್ರತಿಯನ್ನೂ ತಮಗೆ ಕಳುಹಿಸಿಕೊಡುತ್ತೇನೆ. ಆ ಅನುಬಂಧ ಕಾಪಿಯಲ್ಲಿ ಕೆಲವಕ್ಕೆ ಮಾತ್ರ ಅಂದಾಜು ಬೆಲೆಯನ್ನು ಕಳುಹಿಸಿಕೊಟ್ಟಿದ್ದಾರೆ. ಉಳಿದುದ್ದಕ್ಕೆ ಕೊಟ್ಟಿಲ್ಲ. ಅಲ್ಲಿ ಸುಮಾರು 9 ಲಕ್ಷ ರೂ.ಗಳಷ್ಟು ಬೆಲೆಯ ಹೆಚ್ಚುವರಿ ಸಾಮಗ್ರಿಗಳಿವೆ ಅದರಲ್ಲಿ ಬೆಲೆಯನ್ನು ಕಾಣಿಸದೇ ಇರುವುದರಲ್ಲಿ 42,500 ಮೀಟರ್‌ನಷ್ಟು ಪಿ.ವಿ.ಸಿ. ಪೈಪ್‌ಗಳು, 1000 ಮೀಟರನಷ್ಟು ಜಿ.ಐ.ಪೈಪುಗಳು, 350 ಮೆಟ್ರಿಕ್‌ಟನ್‌ನಷ್ಟು ಡಾಂಬರ್ ಇಷ್ಟನ್ನು ಖರೀದಿಸಿರುವ ಬಗ್ಗೆ ಹಣ ಎಷ್ಟಾಗಬಹುದೆಂಬ ವಿವರಗಳು ನಮ್ಮಲ್ಲಿಲ್ಲ. ತಾವು ಹೇಳಿದಂತೆ ಚಿತಾಪುರದಲ್ಲಿ ಏನು ಅವ್ಯವಹಾರವಾಗಿದೆ ಅದರ ಬಗ್ಗೆ ತನಿಖೆಮಾಡಿಸಲು ಇಲ್ಲಿಂದಲೇ ಒಬ್ಬ ಹಿರಿಯ ಅಧಿಕಾರಿಯನ್ನು ಕಳುಹಿಸಿಕೊಟ್ಟಿದ್ದೇವೆ. ಇದು ಕೇವಲ ಗುಲ್ಬರ್ಗಾ ವಿಭಾಗ ಆಗಿರಬಹುದು, ಅಥವಾ ಬೇರೆ ವಿಭಾಗ ಇರಬಹುದು, ಇದರ ಬಗ್ಗೆ ವಿಚಾರಿಸಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಆದರೆ ಯಾದ್ಗೀರ್ ಮತ್ತು ಗುಲ್ಬರ್ಗಾ ವಿಭಾಗದಲ್ಲಿ ನೋಡಿದರೆ ಗುಲ್ಬರ್ಗಾ ವಿಭಾಗದಲ್ಲಿ ಹೆಚ್ಚು ಖರೀದಿ ಆಗಿಲ್ಲ. ಯಾದ್ಗೀರ್ ವಿಭಾಗದಲ್ಲಿ ಹೆಚ್ಚು ಖರೀದಿ ಆಗಿದೆ. ಆದ್ದರಿಂದ ಈಗ ಕೂಡಲೇ ಇಲ್ಲಿಂದ ಒಬ್ಬ ಹಿರಿಯ ಅಧಿಕಾರಿಯನ್ನು ಅಲ್ಲಿಗೆ ಕಳುಹಿಸಿಕೊಡುತ್ತೇನೆ. ಅವರಿಂದ ಒಂದು ವರದಿಯನ್ನು ತರಿಸಿಕೊಳ್ಳುತ್ತೇನೆ. ಆ ವರದಿಯಲ್ಲಿ ಇಂಥ ಒಂದು ತಪ್ಪಾಗಿದೆ ಎಂದು ಕಂಡುಬಂದರೆ ತಾವು ಹೇಳಿದಂತೆ ಲೋಕಾಯುಕ್ತಕ್ಕಾಗಲಿ ಅಥವಾ ಸಿ.ಓ.ಡಿ.ಯವರಿಗಾಗಲಿ ಒಪ್ಪಿಸಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ಹೇಳಿದಂತೆ ಆರ್.ಡಿ.ಪಿ.ಆರ್.ನ ಕಾರ್ಯದರ್ಶಿಯವರನ್ನಾದರೂ ಅಲ್ಲಿಗೆ ಕಳುಹಿಸಿ, ಅವರ ಜೊತೆಗೆ ಎಸ್.ಪಿ.ಡಿ.ಯ ಅಧಿಕಾರಿಯನ್ನು ಕಳುಹಿಸಿದರೆ ಆ ವಸ್ತುಗಳ ಅಂದಾಜು ಬೆಲೆ ಎಷ್ಟು ಇದೆ ಎಂಬುದೂ ಗೊತ್ತಾಗುತ್ತದೆ. ಆದ್ದರಿಂದ ಎಸ್.ಪಿ.ಡಿ.ಯ ಡೈರೆಕ್ಟರ್‌ರವರು, ನಿಮ್ಮ ಒಬ್ಬ ಇಂಜಿನಿಯರ್ ಹಾಗೂ ಒಬ್ಬ ಐ.ಎ.ಎಸ್. ಅಧಿಕಾರಿ ಹೀಗೆ 3ಜನರನ್ನು ಕಳುಹಿಸಿಕೊಟ್ಟು ಅಲ್ಲಿ ಎನ್‌ಕ್ವೈರಿ ಮಾಡಿಸುವುದರ ಆಧಾರದ ಮೇಲೆ ಕೂಡ ನೀವು ಬೇರೆಕಡೆಗೂ ನಿರ್ದೇಶನವನ್ನು ಕೊಡಬಹುದು. ಯಾದ್ಗೀರ್‌ನದಂತೂ ತಾವು ಎನ್‌ಕ್ವೈರಿ ಮಾಡಿಸಲೇಬೇಕು. ಇದಕ್ಕೆ ಸಂಬಂಧಪಟ್ಟಂತೆ ಬೇರೆ ಕಡೆಗೂ ಇದರ ಉಪಯೋಗವಾಗುವುದರಿಂದ ಎಷ್ಟುದಿವಸದಲ್ಲಿ ಎನ್‌ಕ್ವೈರಿ ಮಾಡಿಸಿ ಅದರ ವರದಿಯನ್ನು ತರಿಸಿಕೊಡುತ್ತೀರೆಂಬುದನ್ನು ದಯವಿಟ್ಟು ಹೇಳಬೇಕು.

ಶ್ರೀ ಎಂ.ಪಿ. ಪ್ರಕಾಶ್ : ಈ ವಿಚಾರಕ್ಕೆ ಸಂಬಂಧಪಟ್ಟಂತೆ ನಾವು ಬೇರೆ ಬೇರೆ ಜಿಲ್ಲೆಗಳಿಗೆ ಸಮೀಕ್ಷೆಗೆ ಹೋದಾಗ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚನೆ ನೀಡಿ ನೀವು ಆಗಾಗ್ಗೆ ಸ್ಟೋರ್ಸ್ ಪರ್ಚೇಸನ್ನು ಪರಿಶೀಲಿಸುತ್ತಿರಬೇಕೆಂದು ಆದೇಶವನ್ನು ಕೊಟ್ಟುಬಂದಿದ್ದೇವೆ. ಇದರ ಜೊತೆಗೆ ಇಂಥ ನಿರ್ದಿಷ್ಟ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಾಗಲೂ ಎನ್‌ಕ್ವೈರಿಗೆ ಕಳುಹಿಸಿಕೊಡುವಂಥ ವ್ಯವಸ್ಥೆ ಇದೆ. ನಮ್ಮಲ್ಲಿರತಕ್ಕ ಏರಿಯಾ ಡೆವಲಪ್‌ಮೆಂಟ್ ಅಧಿಕಾರಿಯಾದ ಐ.ಎ.ಎಸ್. ಅಧಿಕಾರಿಯನ್ನು ಕಳುಹಿಸಿಕೊಡುತ್ತೇನೆ. ಇದರಲ್ಲಿ ಕೆಲವು ಖರೀದಿ ಆಗಿರತಕ್ಕದ್ದು ದರ ಕರಾರು ಗುತ್ತಿಗೆಗೆ

ಸಂಬಂಧಪಟ್ಟಂತೆ ಅಂದಾಜು ಮಾಡುವವರಿದ್ದಾರೆ, ಇದರ ಜೊತೆಗೆ ಕೋಟೇಷನ್‌ನ್ನೂ ತೆಗೆದುಕೊಂಡು ಖರೀದಿ ಮಾಡಿದ್ದಾರೆ. ಹೀಗಿರುವುದರಿಂದ ಆ ನಿರ್ದೇಶಕರು ಹೋಗಬೇಕಾದ ಅಗತ್ಯವಿಲ್ಲ. ಏಕತೆಂದರೆ ಅದಕ್ಕೆ ಸಂಬಂಧಪಟ್ಟಂತೆ ಲಿಸ್ಟ್ ಇರುತ್ತದೆ. ಆದ್ದರಿಂದ ನಮ್ಮಲ್ಲಿರತಕ್ಕ ಒಬ್ಬ ಐ.ಎ.ಎಸ್. ಅಧಿಕಾರಿ, ಅಲ್ಲಿರತಕ್ಕ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಅಲ್ಲಿರತಕ್ಕ ಯಾರನ್ನಾದರೂ ಒಬ್ಬ ಇಂಜಿನಿಯರ್‌ನ್ನು ಕರೆದುಕೊಂಡು ಹೋಗಿ ಇನ್ನು ಒಂದು ವಾರದೊಳಗಾಗಿ ಯಾದ್ಗೀರ್ ಮತ್ತು ಗುಲ್ಬರ್ಗಾಗಳ ವರದಿಯನ್ನು ಕೊಡಬೇಕೆಂದು ತಿಳಿಸುತ್ತೇನೆ. ಇದರಲ್ಲಿ ಏನಾದರೂ ಅವ್ಯವಹಾರ ನಡೆದಿದೆ ಎಂದು ಕಂಡು ಬಂದರೆ, ಅಥವಾ ಅಗತ್ಯಕ್ಕಿಂತ ಹೆಚ್ಚು ಸಾಮಗ್ರಿಗಳನ್ನು ಖರೀದಿಸಲಾಗಿದೆ ಎಂದು ಕಂಡುಬಂದರೆ ಅಥವಾ ಖರೀದಿಸಿರುವಂಥ ಸಾಮಗ್ರಿಗಳು ಕಳಪೆ ಮಟ್ಟದ್ದಾಗಿದ್ದರೆ ತಾವು ಸೂಚನೆ ಮಾಡಿದಂತೆ ಲೋಕಾಯುಕ್ತದ ಮೂಲಕವೋ ಅಥವಾ ಇನ್ನು ಬೇರೆ ಯಾವುದಾದರ ಮೂಲಕವೋ ಎನ್‌ಕ್ವೈರಿ ಮಾಡಿಸುವ ಕ್ರಮ ಕೈಗೊಳ್ಳುತ್ತೇನೆ.

ಧಾರವಾಡ ಜಿಲ್ಲಾ ಶಿಗ್ಗಾಂವ್ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ಉಪ ವಿಭಾಗ ಕುರಿತು

2011-ಶ್ರೀ ಮಂಜುನಾಥ್ ಸಿ. ಕುನ್ನೂರು (ಶಿಗ್ಗಾಂವ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?:

ಅ) ಧಾರವಾಡ ಜಿಲ್ಲಾ ಶಿಗ್ಗಾಂವ ಜಿಲ್ಲಾಪಂಚಾಯತ್ ಇಂಜಿನಿಯರಿಂಗ್ ಉಪವಿಭಾಗದಿಂದ 1995-96ರಲ್ಲಿ ವಿವಿಧ ಯೋಜನೆಯಡಿ ಮಾಡಿದ ಕೆಲಸಗಳು ಯಾವುದು. ಅದಕ್ಕೆ ತಗುಲಿದ ಖರ್ಚು ಎಷ್ಟು?

ಆ) ಸದರಿ ಕಾಮಗಾರಿಗಳಲ್ಲಿ ಕಳಪೆ ಕಾಮಗಾರಿಗಳು ಆಗಿವೆಯೆಂದು ಹಾಗೂ ಸಾಕಷ್ಟು ಹಣ ಲೋಪ ಆಗಿದೆಯೆಂದು ಸಾರ್ವಜನಿಕರಿಂದ ದೂರುಗಳು ಬಂದಿವೆಯೇ?

ಇ) ಶಿಗ್ಗಾಂವ ಹಿರಿಬೆಂಡಿಗೇರಿ ರಸ್ತೆ 1ನೇ ಕಿ.ಮಿ. ರಸ್ತೆ ದುರಸ್ತಿಯಲ್ಲಿರುವುದು ನಿಜವೇ?

ಈ) ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳು ಏನು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಅ) ಶಿಗ್ಗಾಂವ ಜಿಲ್ಲಾಪಂಚಾಯತ್ ಇಂಜಿನಿಯರಿಂಗ್ ಉಪವಿಭಾಗದಿಂದ 1995-96ನೇ ಸಾಲಿನಲ್ಲಿ ವಿವಿಧ ಯೋಜನೆಗಳ ಅಡಿಯಲ್ಲಿ 145 ಕೆಲಸಗಳನ್ನು ಮಾಡಲಾಗಿದ್ದು, ಸದರಿ ಕೆಲಸಗಳಿಗೆ ಆದ ಖರ್ಚು 181.414 ಲಕ್ಷ ರೂಪಾಯಿಗಳು. (ಕೆಲಸಗಳ ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ).

ಆ) ಅಂತಹ ಯಾವ ದೂರುಗಳೂ ಬಂದಿರುವುದಿಲ್ಲ.

ಇ) ನಿಜ. ಸದರಿ ದುರಸ್ತಿ ಕೆಲಸವು ಪ್ರಗತಿಯಲ್ಲಿದೆ.

ಈ) ಅನ್ವಯಿಸುವುದಿಲ್ಲ.